

# ದೀಪಗಳು

ಕ್ಯಾಮೆರಾ ತನ್ನ ಜಾಗದಲ್ಲಿ ಸಿದ್ಧವಾಯಿತು, ದೀಪಗಳು ಎಷ್ಟು ಬೇಕೋ ಅಷ್ಟು ಬೆಳಕು ಬೀರಿದವು, ನಿರ್ದೇಶಕರು ಶೂಟಿಂಗ್ ಶುರುವಾಗಲೆಂಬ ಸೂಚನೆ ಕೊಟ್ಟರು.

ಇಬ್ಬರು ಪ್ರೇಮಿಗಳು ಸಂಧಿಸಿದರು. ಒಂದೆರಡು ಸಂಭಾಷಣೆ ಇತ್ತು. ಆ ದೃಶ್ಯದ ಶೂಟಿಂಗ್ ಮುಗಿಯಿತು.

ಕ್ಯಾಮೆರಾದಿಂದ ಸ್ವಲ್ಪ ದೂರದಲ್ಲಿ ಕುಳಿತಿದ್ದ ಡಿಸ್ಟ್ರಿಬ್ಯೂಟರು ಪ್ರೊಡ್ಯೂಸರಿನ ಕಿವಿಯಲ್ಲಿ ಉಸುರಿದರು:

'ಇವತ್ತೇ ಕೊನೆ. ಇನ್ನೆಂದೂ ಇವಳು ರೊಮ್ಯಾಂಟಿಕ್ ಸೀನುಗಳಿಗೆ ಲಾಯಕ್ಕಲ್ಲ. ಪಾಪ ಅನ್ನಿಸುತ್ತೆ ಇವಳನ್ನ ನೋಡಿದರೆ.'

ನಟಿ ಅಭಿನಯದ ಒತ್ತಡದಿಂದ ಪಾರಾದವಳು ತನ್ನ ಉದ್ರೇಕಗೊಂಡ ನರಗಳನ್ನು ಶಮನಗೊಳಿಸಿಕೊಳ್ಳುವುದಕ್ಕಾಗಿ ಒಂದು ಸಿಗರೇಟು ಹಚ್ಚಿದಳು.

ಆ ಚಿತ್ರದ ಲೇಖಕ ದೀಪಗಳಿಂದ ಸಾಕಷ್ಟು ದೂರದಲ್ಲಿದ್ದ ಒಂದು ಮೂಲೆಯಲ್ಲಿ ಅವರನ್ನೇ ನೋಡುತ್ತ, ಅವರ ಮಾತುಗಳನ್ನು ಕೇಳಿಸಿಕೊಳ್ಳುತ್ತ ನಿಂತಿದ್ದ. ಅವನನ್ನು ಗಮನಿಸುವವರು ಯಾರೂ ಇರಲಿಲ್ಲ.

# ನ್ಯಾಯ



ನಾನು ಅನುಮಾನವೇನೂ ಇಲ್ಲದೆ ಒಬ್ಬ ಪ್ರಸಿದ್ಧ ಲಾಯರ್ ಬಳಿಗೆ ಹೋದೆ. 'ನಿನ್ನ ವಾದ ಸರಿ. ಆದರೆ ಆ ಪ್ರತಿವಾದಿಯ ವಾದವೂ ಸರಿಯಾಗಿಯೇ ಇದೆಯಲ್ಲ' ಎಂದವರು ಹೇಳಿದಾಗ, ಮುಚ್ಚುಮರೆಯಿಲ್ಲದ ಮಾತೆಂದರೆ ಇದಪ್ಪಾ ಎಂದು ನನಗೆ ಅನ್ನಿಸಿತು.

'ನಾವು ನಮಗೆ ನಂಬಿಕೆಯಿರುವ ಯಾರಾದರೊಬ್ಬರನ್ನು ಕಂಡು ಅವರ ತೀರ್ಮಾನ ಏನೆಂದು ತಿಳಿದುಕೊಳ್ಳೋಣ ಅಂತ ನಾನೇ ಅವನಿಗೆ ಹೇಳಿದ್ದೆ' ಎಂದೆ.

'ಈ ಕಾಲದಲ್ಲಿ, ಈ ಯುಗದಲ್ಲಿ ಅಂಥ ಮನುಷ್ಯನನ್ನು ಹುಡುಕಿಕೊಳ್ಳುವ ಭರವಸೆಯಿಲ್ಲ!'

'ನನ್ನ ಹತ್ತಿರ ಕೋರ್ಟಿಗೆ ಮನದಟ್ಟಾಗುವಂಥ ರಿಜಿಸ್ಟರ್ಡ್ ಪತ್ರಗಳಿವೆ.'

'ಅವು ನಕಲಿ ಎಂದು ಆಕ್ಷೇಪಿಸಬಹುದು.'

'ನಾನು ಹೇಳುತ್ತಿರೋದು ನೂರಕ್ಕೆ ನೂರರಷ್ಟು ಸತ್ಯ.'

'ನೂರಕ್ಕೆ ನೂರರಷ್ಟು ಮುಗ್ಧ ಎನ್ನಬಹುದಾದವನು ಒಬ್ಬನೂ ಇಲ್ಲ.'

'ಉಹ್ಞೂಂ, ಸಾಧ್ಯವೇ ಇಲ್ಲ.'

'ನೀನು ಕೋಪದ ಭರದಲ್ಲಿ ಅವನನ್ನು ಕೊಲ್ಲುವುದಕ್ಕೆ ಹೋಗಿರಲಿಲ್ಲವೆ?'

'ನನ್ನ ಮಾತನ್ನು ಅವನೇನೂ ಗಂಭೀರವಾಗಿ ತೆಗೆದುಕೊಳ್ಳಲಿಲ್ಲ, ಬಿಡಿ.'

'ಆದರೆ ಅವನು ಅನೇಕ ಮುಂಜಾಗ್ರತಾ ಕ್ರಮಗಳನ್ನು ತೆಗೆದುಕೊಂಡ, ಅನೇಕ ಮಸೀದಿಗಳಿಗೆ ಹೋಗಿ ಹರಕೆ ಹೊತ್ತುಕೊಂಡ.'

ನನಗೆ ತುಂಬಾ ನಗು ಬಂತು. 'ಎಂಥ ಹುಚ್ಚಪ್ಪ.'

'ಅವನು ಹುಚ್ಚ ಅಂತ ಸಾಧಿಸೋದು ನಿನಗೆ ಬಿಟ್ಟಿದ್ದು. ಆದರೆ ಅವನ ಲಾಯರು ನೀನೇ ಹುಚ್ಚ ಎಂದು ಸಾಧಿಸದೆ ಬಿಡುವುದಿಲ್ಲ.'

ನಾನು ಜೋರಾಗಿ ನಗತೊಡಗಿದ್ದನ್ನು ತಡೆದ ಲಾಯರು 'ನಗುವುದಕ್ಕೆ ಕಾರಣವೇನೂ ಇಲ್ಲ' ಎಂದರು.

'ನನ್ನನ್ನು ಹುಚ್ಚ ಅನ್ನೋದೇ ಸಾಕು, ನಗು ಬರೋಕೆ.'

'ಇಲ್ಲ, ಅದರಿಂದ ದುಃಖವಾಗುತ್ತೆ.'

'ಹ್ಯಾಗೆ ಹೇಳಿ ಸರ್.'

'ಹುಚ್ಚಿನಿಂದ ದುಃಖ.'

'ನನ್ನ ಮನಃಸಾಕ್ಷಿ ಸರಿಯಾಗಿದೆ. ಆದ್ದರಿಂದ ಆ ಆಪಾದನೆಗೆ ಅರ್ಥವಿಲ್ಲ.'

'ಹಾಗೆ ಅಂದುಕೊಂಡಿರೋದೇ ಹುಚ್ಚಾಗಿದ್ದೀತು.'

'ಅಂದರೆ ನನ್ನ ಮನಃಸ್ಥಿತಿಯ ಬಗ್ಗೆ ನಿಮಗೇನಾದರೂ ಸಂಶಯವಾ?' ನಾನು ಕೇಳಿದೆ ಗಾಬರಿಯಿಂದ.

'ಹೌದು, ನನಗೆ ಮನದಟ್ಟಾಗಿದೆ. ನಿಮ್ಮ ನಿಮ್ಮ ಹಟಮಾರಿತನವೇ ನೀವಿಬ್ಬರೂ ಹುಚ್ಚರೆಂದು ಸೂಚಿಸುತ್ತೆ.'

'ಆದರೆ ನನ್ನ ಪರ ವಾದಿಸುವುದಾಗಿ ನೀವೇ ಒಪ್ಪಿಕೊಂಡಿದ್ದೀರಲ್ಲ?'

'ಅದು ನನ್ನ ಕರ್ತವ್ಯ.'

ಲಾಯರು ಆಳವಾದೊಂದು ನಿಟ್ಟುಸಿರು ಬಿಟ್ಟು ಮುಂದುವರಿಸಿದರು: 'ನನಗೆ ಗೊತ್ತು, ನಿಮ್ಮಿಬ್ಬರ ಹಾಗೆ ನಾನೂ ಒಬ್ಬ ಹುಚ್ಚ ಅಂತ.'